# ಸಾರ್ವಜನಿಕ ವ್ಯವಹಾರಗಳ ಸೂಚ್ಯಂಕ – 2022

## ಪತ್ರಿಕಾ ಟಿಪ್ಪಣಿ

ಸಾರ್ವಜನಿಕ ವ್ಯವಹಾರಗಳ ಸೂಚ್ಯಂಕವು (Public Affairs Index 2022 - PAI 2022) ಒಂದು ನಿಷ್ಪಕ್ಷಪಾತ ಮತ್ತು ಸ್ವತಂತ್ರ ಪ್ರಯತ್ನವಾಗಿದೆ. ಈ ಪರಿಮಾಣಾತ್ಮಕ ಮೌಲ್ಯಮಾಪನವು ಕೇಂದ್ರ ಸರ್ಕಾರದ ಮೂಲಗಳ ಅಂಕಿ–ಸಂಗಳನ್ನು ಆಧರಿಸಿ ಹಒಂದಿರುವಂತಹ ನಿಷ್ಪಕ್ಷಪಾತ ಮತ್ತು ಸ್ವತಂತ್ರ ಪ್ರಯತ್ನವಾಗಿದೆ.

PAI- 2022 ಅನ್ನು 14ನೇ ಅಕ್ಟೋಬರ್ 2022 ಶುಕ್ರವಾರದಂದು ಬಿಡುಗಡೆ ಮಾಡಲಾಗುವುದು.

- ಸಮಯ: ಸಂಜೆ 4.00 ರಿಂದ 6.00 ರವರೆಗೆ

- ಸ್ಥಳ: ಆಡಳಿತ ಸಂಶೋಧನಾ ಸಂಸ್ಥೆ 01, ಇನ್‌ಫ್ಯಾಂಟ್ರ ರಸ್ತೆ, ಶಿವಾಜಿನಗರ, ಬೆಂಗಳೂರು, ಕರ್ನಾಟಕ.

ಜಿ. ಗುರುಚರಣ್ (ನಿವೃತ್ತ ಭಾ.ಆ.ಸೇ. ಅಧಿಕಾರಿ), ನಿರ್ದೇಶಕರು, PAC, ಅವರು ತಮ್ಮ ಆರಂಭಿಕ ಟಿಪ್ಪಣಿಯಲ್ಲಿ ಹೇಳಿದ್ದು PAI ನ ಈ ಏಳನೇ ಆವೃತ್ತಿಯು,' ಭಾರತದ ರಾಜ್ಯಗಳು 2021–22ನೇ ವರ್ಷದಲ್ಲಿ ತಮ್ಮ ಆಡಳಿತ ಪ್ರದರ್ಶನದ ಸಮರ್ಪಕತೆ ಮತ್ತು ಗುಣಮಟ್ಟವನ್ನು ನಿರ್ಧರಿಸುವ ಬುನಾದಿಯಾಗಿ, ಸಾಂವಿಧಾನಿಕ ಕಡ್ಡಾಯ ಚೌಕಟ್ಟುಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಒಂದು ಮಾದರಿ ಬದಲಾವಣೆಯನ್ನು ಉಂಟು ಮಾಡುತ್ತದೆ. ರಾಜ್ಯಗಳ ಆಡಳಿತ ನಿರ್ವಹಣೆಯನ್ನು ಅಳೆಯಲು ಬಳಸುವ ವಿಷಯಗಳು, ಉಪವಿಷಯಗಳು ಮತ್ತು ಸೂಚಕಗಳು ಭಾರತದ ಸಂವಿಧಾನದಿಂದ ಪ್ರಾಥಮಿಕವಾಗಿ ರೂಪಿಸಲಾಗಿವೆ. ಕ್ರಮಬದ್ಧವಾದ ದೃಷ್ಟಿಕೋನದಿಂದ ಸಹ, PAI 2022 ಅದರ ಹಿಂದಿನ ಆವೃತ್ತಿಗಳ ಮುನ್ಸೂಚಕಗಳಿಗಿಂತ ಹೆಚ್ಚು ಕಠಿಣವಾಗಿದೆ. PAI 2022 ಬಳಸಿದ ವಿಧಾನಶಾಸ್ತ್ರದ ಮೇಲಿನ PAC ಯ ಗಮನವು, ವಿಶ್ಲೇಷಣೆಯಲ್ಲಿ ವೈಜ್ಞಾನಿಕ ಕಠಿಣತೆಯನ್ನು ತುಂಬುವುದು ಮತ್ತು ವ್ಯಕ್ತಿನಿಷ್ಠತೆಯನ್ನು ನಿವಾರಿಸುವುದಾಗಿದೆ.

*ಮುಖ್ಯ ಅತಿಥಿಗಳಾದ ಶ್ರೀ ವಿ.ಸುದೀಶ್ ಪೈ, ಹಿರಿಯ ವಕೀಲರು, ಇವರು ತಿಳಿಸಿದಂತೆ, "ಸಂವಿಧಾನ, ಸ್ವಾತಂತ್ರ್ಯದಿಂದ ಲಭಿಸಿದಂತಹ ಅಧಿಕಾರದ ಸನ್ನದು, ಅಧಿಕಾರದಿಂದ ಲಭಿಸಿರುವಂತಹ ಸ್ವಾತಂತ್ರ್ಯದ ಹಕ್ಕುಪತ್ರವನ್ನಲ್ಲ. ಜನರ ಸನ್ನದು ಅಲ್ಲ. ಜನರ ಹಕ್ಕುಗಳು ಹಾಗೂ ಸ್ವಾತಂತ್ರ್ಯ ರಾಜ್ಯದ ಅಧಿಕಾರವನ್ನು ಸೀಮಿತಗೊಳಿಸುತ್ತದೆ. ಉಳಿದುಕೊಳ್ಳುವುದು ಎಣಿಕೆಯಷ್ಟು ಅಧಿಕಾರವಿರುವ ಸೀಮಿತ ಸರ್ಕಾರ. ಸಂವಿಧಾನ ಒದಗಿಸಿರುವ ಸಂಸ್ಥೆಗಳು ಹಾಗೂ ಅವುಗಳ ವಿವಿಧ ಪ್ರಾವಧಾನಗಳು, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಕೇವಲ ಒಣ ಆಶ್ವಾಸನೆಗಳು ಹಆಗೂ ನ್ಯಾಯವಲ್ಲ, ಬದಲಿಗೆ ಉತ್ತಮ ಆಡಳಿತವನ್ನು ಖಾತ್ರಿಪಡಿಸುವುದಕ್ಕಾಗಿ ರೂಪಿಸಲಾಗಿವೆ. ಭಾಗ 3 ಮತ್ತು 4ರ ಜೊತೆಗೆ ಪೀಠಿಕೆಯು ಸಂವಿಧಾನದ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. (ಪಿಎಐ 2022), ಉತ್ತಮ ಆಡಳಿತವನ್ನು ಒದಗಿಸುವುದು ಹಾಗೂ ಸಾಂವಿಧಾನಿಕ ನ್ಯಾಯದ ದೃಷ್ಟಿಯ ಸಾಧನೆ ಈಡಕೇರಿಕೆಯ ನಿಟ್ಟಿನಲ್ಲಿ ಸರ್ಕಾರಗಳ ಕಾರ್ಯನಿರ್ವಹಣೆಯನ್ನು ಅಂದಾಜಿಸುತ್ತದೆ."*

ಡಾ. ಎ. ರವೀಂದ್ರ (ಭಾ.ಆ.ಸೇ., ನಿವೃತ್ತ), ಅಧ್ಯಕ್ಷರು, ಪಿಎಸಿ, ಇವರು ತಮ್ಮ ಭಾಷಣದಲ್ಲಿ, *"ಪಿಎಐ–2022 ಸ್ವತಂತ್ರ, ಆಧುನಿಕ ಭಾರತದ, ಅದರ ಸಾಂವಿಧಾನಿಕ ಬೇರುಗಳ ಕಡೆ ಮರಳುತ್ತದೆ. ಇದು ಸಂವಿಧಾನದ ಪೀಠಿಕೆಯಲ್ಲಿ ಒದಗಿಸಿರುವ ಉತ್ತಮ ಆಡಳಿತ – ನ್ಯಾಯ: ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯದಂತಹ ಅಂಶಗಳಿಂದ ಕೂಡಿರುವ ಮೂಲಭೂತ ದಾಖಲೆಯ ಸಾರಾಂಶವನ್ನು ರಾಜ್ಯಗಳು ಹಾಗೂ ಕೇಂದ್ರ ಸರ್ಕಾರಗಳಿಗೆ ನೆನಪಿಸುತ್ತದೆ ಮತ್ತು ರಾಜ್ಯ ನೀತಿಯ ನಿರ್ದೇಶಕ ತತ್ವಗಳನ್ನು ವಿವರಿಸುತ್ತದೆ. ಇದು ರಾಜ್ಯ ಸರ್ಕಾರಗಳನ್ನು ಹೆಚ್ಚು ಜನಕೇಂದ್ರಿತ ಆಡಳಿತ ಒದಗಿಸುವ ಕಡೆ ಗಮನ ನೀಡುವ ನಿಟ್ಟಿನಲ್ಲಿ ಪುಷ್ಟೀಕರಿಸುತ್ತದೆ,"* ಎಂದರು.

ಭಾರತದ ಸ್ವಾತಂತ್ರ್ಯದ "ಅಮೃತಕಾಲ" ದಲ್ಲಿ PAI 2022 ಭಾರತದ ಪ್ರಜಾಪ್ರಭುತ್ವವನ್ನು ಮುನ್ನಡೆಸುವಂತಹ ಸಾಂವಿಧಾನಿಕ ಒಪ್ಪಂದವನ್ನು ನನಸಾಗಿಸುವ ರಾಜ್ಯ ಸರ್ಕಾರದ ಬದ್ಧತೆಯನ್ನು ನಿರ್ಧರಿಸುತ್ತದೆ. ಈ ವರ್ಷ ಆಡಳಿತದ ವಿಶ್ಲೇಷಣೆಯು ಸುಸ್ಥಿರ ಅಭಿವೃದ್ಧಿಯ ಗುರಿಯ ಚೌಕಟ್ಟಿನಿಂದ, ಸಾಂವಿಧಾನಿಕವಾಗಿ ಪ್ರತಿಷ್ಠಾಪಿಸಿದ ನ್ಯಾಯದ ನೀತಿಯ ಕಡೆಗೆ ಬದಲಾವಣೆಯನ್ನು

ಅನುಭವಿಸುತ್ತದೆ. ಈ ನ್ಯಾಯದ ಪರಿಕಲ್ಪನೆಯು ಮೂರು ವಿಷಯಗಳು: (ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ರಾಜಕೀಯ ನ್ಯಾಯ) – ಐದು ಉಪವಿಷಯಗಳು ಮತ್ತು 22 ಸೂಚಕಗಳ ಮೂಲಕ ಕಾರ್ಯಾಚರಣೆಗೊಳಿಸಲಾಗಿದೆ.

PAI 2022 ಕ್ರಮ ಶಾಸ್ತ್ರೀಯ ಬದಲಾವಣೆಯನ್ನು ಸಹ ಕಂಡಿದೆ ಮತ್ತು Technique for Order of Preference by Similarity to Ideal Solution(TOPSIS) ಕ್ರಮವನ್ನು ಒಂದು ಸಂಯೋಜಿತ ಸೂಚ್ಯಂಕವನ್ನು ಕಂಡುಕೊಳ್ಳಲು, ಒಂದು Multi CriteriaDecision Making (MCDM) ಅನುಸಂಧಾನವನ್ನು ಪರಿಚಯಿಸುತ್ತದೆ. TOPSISನ ಹಿಂದಿನ ಉದ್ದೇಶ ಏನೆಂದರೆ, ಆರಿಸಿದ ಪರ್ಯಾಯವು ಸಕಾರಾತ್ಮಕ ಆದರ್ಶ ಪರಿಸ್ಥಿತಿಗೆ ಹತ್ತಿರದಲ್ಲಿರಬೇಕು ಮತ್ತು ಋಣಾತ್ಮಕ (ನಕಾರಾತ್ಮಕ) ಆದರ್ಶ ಪರಿಸ್ಥಿತಿಗೆ ದೂರದಲ್ಲಿರಬೇಕು.ಈ ಕ್ರಮವು ಸೂಚಕಗಳಿಗೆ ತೂಕದ ನಿಯೋಜನೆಯ ಪ್ರಕ್ರಿಯೆಯನ್ನು ತೊಲಗಿಸುತ್ತದೆ. ಮತ್ತು ಆದರ್ಶ ಪರಿಹಾರದ ಸೆಟ್ಟಿಂದ ವಿಚಲನವನ್ನು ಪರಿಗಣಿಸುತ್ತದೆ. ಈ ವಿಚಲನವನ್ನು ಸೂಚಕಗಳ ನಡುವಿನ ಸಹವರ್ತಿತ್ವದ (co-variance) ನೆರವಿನಿಂದ ಅಳೆಯುತ್ತಾರೆ (using Mahalanobis distance).

ರಾಜ್ಯಗಳನ್ನು ಅವುಗಳ ಗಾತ್ರ ಮತ್ತು ಜನಸಂಖ್ಯೆಯ ಆಧಾರವನ್ನು ಪರಿಗಣಿಸಿ, 18 ದೊಡ್ಡ ರಾಜ್ಯಗಳು ಮತ್ತು 10 ಸಣ್ಣ ರಾಜ್ಯಗಳೆಂದು ವಿಂಗಡಿಸಿ, ಅವುಗಳಲ್ಲಿನ ವ್ಯತ್ಯಾಸಗಳನ್ನು ದಾಖಲಿಸಲಾಗಿದೆ. PAI 2022, ಕೇಂದ್ರಾಡಳಿತ ಪ್ರದೇಶಗಳನ್ನು, ಅಂಕಿ ಅಂಶಗಳ ಅಲಭ್ಯತೆಯಿಂದ ಮತ್ತು ಅವರ ಆಡಳಿತದಲ್ಲಿ ಕೆಲವು ಸಾಂವಿಧಾನಿಕ ಕಡ್ಡಾಯ ಕಾರ್ಯಗಳು ಅಪ್ರಸ್ತುತವಾಗಿರುವುದರಿಂದ ಈ ವಿಶ್ಲೇಷಣೆಯಿಂದ ಕೈಬಿಟ್ಟಿದೆ.

**PAI 2022 ಫಲಿತಾಂಶಗಳು**

**ದೊಡ್ಡ ರಾಜ್ಯಗಳು**

| ದೊಡ್ಡ ರಾಜ್ಯಗಳು | ಅನುಕ್ರಮಣಿಕೆ ಸ್ಕೋರ್ | ಶ್ರೇಣಿ |
|---|---|---|
| ಹರ್ಯಾಣ | 0.6948 | 1 |
| ತಮಿಳುನಾಡು | 0.6668 | 2 |
| ಕೇರಳ | 0.6666 | 3 |
| ಛತ್ತೀಸ್ಗಢ | 0.6305 | 4 |
| ಪಂಜಾಬ್ | 0.6223 | 5 |
| ಕರ್ನಾಟಕ | 0.6216 | 6 |
| ಆಂಧ್ರ ಪ್ರದೇಶ | 0.5925 | 7 |
| ಮಧ್ಯ ಪ್ರದೇಶ | 0.5768 | 8 |
| ರಾಜಸ್ಥಾನ | 0.5525 | 9 |
| ಗುಜರಾತ್ | 0.5473 | 10 |
| ಒರಿಸ್ಸಾ | 0.5412 | 11 |
| ಉತ್ತರ ಪ್ರದೇಶ | 0.5201 | 12 |
| ಅಸ್ಸಾಂ | 0.5024 | 13 |
| ತೆಲಂಗಾಣ | 0.4871 | 14 |
| ಬಿಹಾರ | 0.4609 | 15 |
| ಮಹಾರಾಷ್ಟ್ರ | 0.4416 | 16 |
| ಪಶ್ಚಿಮ ಬಂಗಾಳ | 0.4238 | 17 |
| ಜಾರ್ಖಂಡ್ | 0.3534 | 18 |

**ಸಣ್ಣ ರಾಜ್ಯಗಳು**

| ಸಣ್ಣ ರಾಜ್ಯಗಳು | ಅನುಕ್ರಮಣಿಕೆ ಸ್ಕೋರ್ | ಶ್ರೇಣಿ |
|---|---|---|
| ಸಿಕ್ಕಿಂ | 0.5715 | 1 |
| ಹಿಮಾಚಲ ಪ್ರದೇಶ | 0.5048 | 2 |
| ಉತ್ತರಾಖಂಡ್ | 0.4953 | 3 |
| ಗೋವಾ | 0.4828 | 4 |
| ಮಿಜೋರಾಂ | 0.4700 | 5 |
| ಅರುಣಾಚಲ ಪ್ರದೇಶ | 0.4639 | 6 |
| ಮೇಘಾಲಯ | 0.4466 | 7 |
| ಮಣಿಪುರ | 0.3441 | 8 |
| ತ್ರಿಪುರಾ | 0.3166 | 9 |
| ನಾಗಾಲ್ಯಾಂಡ್ | 0.3104 | 10 |

**ಅತ್ಯುತ್ತಮ ಪ್ರದರ್ಶಕರಿಗೆ ಸೂಚ್ಯಂಕ ಮಟ್ಟದ ಒಳಮಾಹಿತಿ**

| ರಾಜ್ಯ | | ಆರ್ಥಿಕ ನ್ಯಾಯ | ರಾಜಕೀಯ ನ್ಯಾಯ | ಸಾಮಾಜಿಕ ನ್ಯಾಯ |
|---|---|---|---|---|
| **ಹರ್ಯಾಣ** | ಸಾಧಕಗಳು | ಕಾರ್ಮಿಕರ ಉತ್ಪಾದಕತೆ<br><br>ದಿನಗೂಲಿ ನೌಕರರ ಉತ್ತಮ ಜೀವನಗುಣಮಟ್ಟದ ಖಾತ್ರಿ | ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣೆ ಹಂಚಿಕೆ<br><br>ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಮಾಡುವ ಸ್ವಾತಂತ್ರ್ಯದ ಬದ್ಧತೆ | ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಪರಿಣಾಮಗಳು<br><br>ಸುರಕ್ಷಿತ ಕುಡಿಯುವ ನೀರು ಹಾಗೂ ನೈರ್ಮಲ್ಯ ಸೌಕರ್ಯ<br><br>ಆರಂಭಿಕ ಬಾಲ್ಯ ಅಭಿವೃದ್ಧಿಯ ಪರಿಣಾಮಗಳು<br><br>ಸುಲಭ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರ |
| | **ಆತಂಕಗಳು** | ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚ<br><br>ಸಾಮಾಜಿಕ ಸುರಕ್ಷತೆಯ ವ್ಯಾಪ್ತಿ<br><br>ಉದ್ಯೋಗಾವಕಾಶಗಳು | ಅಪರಾಧಗಳು<br><br>ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಹೊಂದುವಲ್ಲಿ ಪೋಲಿಸರ ಸಾಮರ್ಥ್ಯ<br><br>ಆರೋಪ ಎದುರಿಸುತ್ತಿರುವ ಜನರಿಗೆ ಪರಿಹಾರ | ಕ್ರಮಬದ್ಧವಾದ ಮತ್ತು ವಿಶ್ವಸನೀಯ ವಿದ್ಯುತ್ ಸರಬರಾಜು |

| | | | | |
|---|---|---|---|---|
| **ತಮಿಳುನಾಡು** | ಸಾಧನಗಳು | ಆದಾಯ ಮತ್ತು ಸಂಪನ್ಮೂಲಗಳ ಸಮಾನ ವಿಭಜನೆ | ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಕ್ರೋಢೀಕರಿಸುವಲ್ಲಿ ಪೋಲಿಸರ ಸಾಮರ್ಥ್ಯ<br><br>ಅಪರಾಧಗಳು<br><br>ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣಾ ಹಂಚಿಕೆ<br><br>ಆರೋಪ ಎದುರಿಸುತ್ತಿರುವ ಜನರಿಗೆ ಪರಿಹಾರ | ಆನಸಂಖ್ಯೆ ಆರೋಗ್ಯ<br><br>ಆರಂಭಿಕ ಬಾಲ್ಯ ಅಭಿವೃದ್ಧಿಯ ಫಲಿತಾಂಶಗಳು<br><br>ಶುದ್ಧ ಅಡುಗೆ ತಯಾರಿಸುವ ಎಣ್ಣೆಯ ದೊರೆಯುವಿಕೆ |
| | ಆಕಾಂಕ್ಷೆಗಳು | ಅಭಿವೃದ್ಧಿಯ ಮೇಲಿನ ಸಾರ್ವಜನಿಕ ವೆಚ್ಚಗಳು | - | ಕಲಿಕಾ ಫಲಿತಾಂಶಗಳು |
| ಕೇರಳಜ | ಸಾಧನಗಳು | ಕಾರ್ಮಿಕರ ಉತ್ಪಾದಕತೆ<br><br>ದಿನಗೂಲಿ ನೌಕರರ ಉತ್ತಮ ಜೀವನಗುಣಮಟ್ಟ ಖಾತ್ರಿಪಡಿಸುವಿಕೆ<br><br>ಆದಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ | ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳನ್ನು ಕ್ರೋಢೀಕರಿಸುವಲ್ಲಿ ಪೋಲಿಸರ ಸಾಮರ್ಥ್ಯ<br><br>ಆರೋಪ ಎದುರಿಸುತ್ತಿರುವವರಿಗೆ ಪರಿಹಾರ<br><br>ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆ ಹಂಚಿಕೆ | ಜನಸಂಖ್ಯಾ ಆರೋಗ್ಯ<br><br>ಆರಂಭಿಕ ಬಾಲ್ಯ ಅಭಿವೃದ್ಧಿ ಫಲಿತಾಂಶಗಳು<br><br>ಸುರಕ್ಷಿತ ನೈರ್ಮಲ್ಯ ವ್ಯಾಪ್ತಿ |
| | ಆಕಾಂಕ್ಷೆಗಳು | ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚ<br><br>ಉದ್ಯೋಗಾವಕಾಶಗಳು<br><br>ಕಾರ್ಮಿಕರ ಉತ್ಪಾದಕತೆ<br><br>ದಿನಗೂಲಿ ನೌಕರರಿಗೆ ಉತ್ತಮ ಜೀವನ | - | ಸುಲಭ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರ |

| | | | | |
|---|---|---|---|---|
| | | ಗುಣಮಟ್ಟದ ಖಾತ್ರಿ | | |
| ಸಿಕ್ಕಿಂ | ಸಾಧನೆಗಳು | ಆರ್ಥಿಕತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ | ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಮಾಡುವ ಸ್ವಾತಂತ್ರ್ಯದ ಬದ್ಧತೆ | ಆರಂಭಿಕ ಬಾಲ್ಯದ ಅಭಿವೃದ್ಧಿಯ ಫಲಿತಾಂಶಗಳು<br><br>ಭೂ ಬಳಕೆಯ ಸಾಮರ್ಥ್ಯ ಮತ್ತು ಪರಿಸರ ಸುಸ್ಥಿರತೆ |
| | ಆಕಾಂಕ್ಷೆಗಳು | ಅಭಿವೃದ್ಧಿಯ ಮೇಲೆ ಸಾರ್ವಜನಿಕ ವೆಚ್ಚ<br><br>ಆದಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ<br><br>ಸ್ವಂತ ಮೂಲದ ಆದಾಯ ಕ್ರೋಢೀಕರಣ | - | ಶಾಲಾ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳು |

| | | | | |
|---|---|---|---|---|
| **ಹಿಮಾಚಲ ಪ್ರದೇಶ** | ಸಾಧನೆಗಳು | ಆರ್ಥಿಕತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ<br><br>ಸ್ವಂತ ಮೂಲದ ಆದಾಯ ಕ್ರೋಢೀಕರಣ<br><br>ದಿನಗೂಲಿ ನೌಕರರಿಗೆ ಉತ್ತಮ ಜೀವನ ಗುಣಮಟ್ಟದ ಖಾತ್ರಿ | ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಹಂಚಿಕೆ<br><br>ಸ್ಥಳೀಯ ಸಂಸ್ಥೆಗಳಿಗೆ ಸ್ವತಂತ್ರ ಹಣಕಾಸು ಹಂಚಿಕೆಯ ಬದ್ಧತೆ<br><br>ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳನ್ನು ಕ್ರೋಢಿಕರಿಸುವಲ್ಲಿ ಪೋಲಿಸರ ಸಾಮರ್ಥ್ಯ | ಜನಸಂಖ್ಯಾ ಆರೋಗ್ಯ<br><br>ಸುರಕ್ಷಿತ ಕುಡಿಯುವ ನೀರಿನ ದೊರೆಯುವಿಕೆ<br><br>ಸುಲಭ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರದ<br><br>ಶಾಲಾ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳು |
| | ಆತಂಕಗಳು | ಸಾಮಾಜಿಕ ಸುರಕ್ಷತೆಯ ವ್ಯಾಪ್ತಿ<br><br>ಆದಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ | ಅಪರಾಧಗಳು | ಕ್ರಮಬದ್ಧ ಹಾಗೂ ವಿಶ್ವಸನೀಯ ವಿದ್ಯುತ್ ಸರಬರಾಜು<br><br>ಭೂಬಳಕೆಯ ಸಮರ್ಥ ಹಾಗೂ ಪರಿಸರ ಸುಸ್ಥಿರತೆ |
| **ಉತ್ತರಾಖಾಂಡ್** | ಸಾಧನೆಗಳು | | ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳನ್ನು ಕ್ರೋಢಿಕರಿಸುವಲ್ಲಿ ಪೋಲಿಸರ ಸಾಮರ್ಥ್ಯ<br><br>ಸುಲಭ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರ | ಕ್ರಮಬದ್ಧ ಹಾಗೂ ವಿಶ್ವಸನೀಯ ವಿದ್ಯುತ್ ಸರಬರಾಜು<br><br>ಸುರಕ್ಷಿತ ಕುಡಿಯುವ ನೀರಿನ ದೊರೆಯುವಿಕೆ<br><br>ಭೂಬಳಕೆಯ ಸಮರ್ಥ ಹಾಗೂ ಪರಿಸರ ಸುಸ್ಥಿರತೆ |
| | ಆತಂಕಗಳು | ದಿನಗೂಲಿ ನೌಕರರಿಗೆ ಉತ್ತಮ ಜೀವನಗುಣಮಟ್ಟದ ಖಾತ್ರಿ<br><br>ಉದ್ಯೋಗಾವಕಾಶಗಳು<br><br>ಅಭಿವೃದ್ಧಿಯ ಮೇಲೆ ಸಾರ್ವಜನಿಕ ವೆಚ್ಚ<br><br>ಆದಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ | ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣಾ ಹಂಚಿಕೆ | - |

**ಸಂಪರ್ಕಿಸಬೇಕಾದ ವ್ಯಕ್ತಿಗಳು**

- ಡಾ. ಅನ್ನಪೂರ್ಣ ರವಿಚಂದರ್, ಮುಖ್ಯಸ್ಥರು – ನೀತಿ ಒಳಗೊಳ್ಳುವಿಕೆ ಹಾಗೂ ಸಂವಹನಂ+91 9880844862
    - annapoorna@pacindia.org
- ಅಂಜನ ಕಿಳ್ಳಪಡತ್ತಿಲ್, ಕಾರ್ಯಕ್ರಮ ಅಧಿಕಾರಿ, ಪಿಎಸಿ ಮತ್ತು ತಂಡದ ಮುಖ್ಯಸ್ಥರು, PAI2022
    - +91 70341 53192
    - anjanakizhpadathil@pacindia.org